# ಕಿಲುಬು

■ ವಸುಮತಿ ಉಡುಪ

## ಒಂದಾದ ನಾಗಶ್ರೀ-ರಾಮಚಂದ್ರ

‘ಅವನಿಗೇನಂತೆ, ಸಾವಿರ ಹೇಳ್ತಾನೆ. ಅವನು ಹೇಳಿದ್ದಕ್ಕೆಲ್ಲಾ ಕುಣೀತಿದ್ರೆ ದೇವ್ರೇ ಗತಿ..’

‘ಹಂಗಲ್ಲ, ಹುಡುಗ ಬುದ್ಧಿವಂತ. ಓದ್ಬೇಕು ಅಂತ ಆಸೆ ಇದ್ರೆ ಓದ್ಲಿ..’

‘ಓದಿದ್ಮೇಲೆ ಅವನು ವಾಪಸು ಇಲ್ಲಿಗೆ ಬರ್ತಾನಾ? ಎಲ್ಲಾ ಕೈಕೊಟ್ಟು ಹೊರಟು ಹೋದ್ರೆ ನಾನೊಬ್ಬೇ ಏನು ಸಾಯ್ಲಿ?’ ಎಷ್ಟೇ ಗಂಭೀರವಾಗಿರಲೆತ್ನಿಸಿದರೂ ನಾಗಶ್ರೀಯ ದನಿಯಲ್ಲಿ ದುಗುಡ ಹೊರ ಹೊಮ್ಮಿ ಅವಳ ಅಂತರಂಗವನ್ನು ಬಯಲು ಮಾಡಿತು.

